ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 5–11–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ:<br>ಅಧ್ಯಕ್ಷತೆ:<br>ಡಾ. ಜಿ. ಪರಮೇಶ್ವರ್,<br>ಗೃಹ ಸಚಿವರು.<br>ಸಂಪರ್ಕ<br>ವಿ. ಶೇಖರ್,<br>ಮೊ. ನಂ.<br>9480800074/9480800728 | 06–11–2015<br>ಶುಕ್ರವಾರ<br>ಬೆಳಿಗ್ಗೆ<br>9–15 ಗಂಟೆಗೆ | ಸಮ್ಮೇಳನ ಸಭಾಂಗಣ,<br>7ನೇ ಮಹಡಿ, ಪೊಲೀಸ್<br>ಮಹಾನಿರ್ದೇಶಕರ ಕಚೇರಿ, ನೃಪತುಂಗ ರಸ್ತೆ,<br>ಬೆಂಗಳೂರು – 560 001 |
| 2. | ದಕ್ಷಿಣ ಭಾರತ ವಿಜ್ಞಾನ ನಾಟಕೋತ್ಸವ :<br>ಉದ್ಘಾಟನೆ:<br>ಹೆಚ್. ಜನಾರ್ಧನ್,<br>ನಿರ್ದೇಶಕರು,<br>ರಂಗಾಯಣ, ಮೈಸೂರು | 06–11–2015<br>ಶುಕ್ರವಾರ<br>ಬೆಳಿಗ್ಗೆ<br>10–30 ಗಂಟೆಗೆ | ಸಭಾಂಗಣ, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಬೆಂಗಳೂರು. |
| 3. | Launching Ceremony of ‘JNANA SANGAMA’ Smart Karnataka Education Yardstick (KEY) & Skill Training | 06–11–2015<br>Friday<br>at<br>11-00 AM | Jnana Jyothi Auditorium,<br>Central College Premises,<br>Bengaluru. |

| | | | |
|---|---|---|---|
| | **Inauguration:**<br>**T.B. Jayachandra,**<br>**Minister for Higher Education and Law and Parliamentary Affairs.**<br>**Presided by:**<br>**R. Roshan Baig**<br>**Minister for Infrastructure Development, Information and Public Relation and Haj.**<br>**Presence:**<br>**Ramalinga Reddy,**<br>**Minister for Transport and District in-charge Bengaluru (Urban)** | | |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

**ವಿಜ್ಞಾನ ತಂತ್ರಜ್ಞಾನದಿಂದ ದೇಶದ ಅಭಿವೃದ್ಧಿ ಸಾಧ್ಯ: ಮುಖ್ಯಮಂತ್ರಿ ಸಿದ್ದರಾಮಯ್ಯ**

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

ವಿಜ್ಞಾನ ಹಾಗೂ ತಂತ್ರಜ್ಞಾನ ಅಭಿವೃದ್ಧಿಯಿಂದ ಅನೇಕ ಜನಪರ ಕೆಲಸಗಳನ್ನು ಮಾಡಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ವಿ.ವಿ.ಪುರಂನ ಬೆಂಗಳೂರು ತಾಂತ್ರಿಕ ವಿಶ್ವವಿದ್ಯಾಲಯದ ಕುವೆಂಪು ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗದ್ದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ 8 ನೇ ಸಮ್ಮೇಳನವನ್ನು ಉದ್ಘಾಟಿಸಿ ಮಾಡತನಾಡುತ್ತಿದ್ದರು.

ಬೆಂಗಳೂರಿನಲ್ಲಿ ಇನ್ನೂ ಸಂಚಾರ ವ್ಯವಸ್ಥೆ, ಕಸವಿಲೇವಾರಿಯಂತಹ ಸಮಸ್ಯೆಗಳು ಸುಧಾರಣೆಗೊಳ್ಳಬೇಕಿದೆ. ಹೊಸ ತಂತ್ರಜ್ಞಾನಗಳ ಅಳವಡಿಕೆಯಿಂದ ಜನರ ಸಮಸ್ಯೆಗಳನ್ನು ದೂರವಿಡಬಹುದಾಗಿದೆ. ವಿದ್ಯಾರ್ಥಿಗಳು ಇಂಜಿನಿಯರಿಂಗ್, ವೈದ್ಯಕೀಯ ಕೋರ್ಸ್‍ಗಳನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಸಾಮಾನ್ಯ ವಿಜ್ಞಾನ, ಸಂಶೋಧನೆಗಳನ್ನು ಹೆಚ್ಚು ಜನರು ಆಯ್ಕೆ ಮಾಡಿಕೊಳ್ಳುವುದು ಒಳಿತು. ವಿಜ್ಞಾನ ತಂತ್ರಜ್ಞಾನದ ಹೊಸ ಆವಿಷ್ಕಾರಗಳಿಗೆ ಸರ್ಕಾರ ಎಲ್ಲ ರೀತಿಯಲ್ಲಿ ಸ್ಪಂದಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರಾದ ಪದ್ಮಭೂಷಣ ಪ್ರೊ. ಯು. ಆರ್. ರಾವ್, ಕಳೆದ ಎರಡು ದಶಕಗಳಲ್ಲಿ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯಿಂದ ಔದ್ಯೋಗಿಕ ಕ್ರಾಂತಿ ಉಂಟಾಗಿದೆ. ಅಣುಶಕ್ತಿ, ಬಾಹ್ಯಾಕಾಶ ತಂತ್ರಜ್ಞಾನದಲ್ಲೂ ಭಾರತ ಮಂಚೂಣಿಯಲ್ಲಿದೆ. ಆದರೂ ಎಲೆಕ್ಟ್ರಾನಿಕ್ ಉಪಕರಣಗಳು ಹೆಚ್ಚಾಗಿ ಹೊರದೇಶಕ್ಕೇ ಬೇಡಿಕೆಯಿದೆ. ಬೇರೆ ದೇಶದ ಮೊಬೈಲ್, ಕ್ಯಾಮೆರಾ ಮುಂತಾದವುಗಳನ್ನು ನಾವು ಬಳಸುತ್ತಿದ್ದೇವೆ. ಕಸ ವಿಲೇವಾರಿ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಡೆಂಗ್ಯೂ ಅಂತಹ ಕಾಯಿಲೆಗಳು ಜನರನ್ನು ಬಾಧಿಸುತ್ತಿದೆ. ಇದಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ಎರಡೂ ಕೈ ಜೋಡಿಸಿ ಸಮಸ್ಯೆ ಬಗೆಹರಿಸಬೇಕೆಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎಸ್.ಆರ್. ಪಾಟೀಲ್, ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ತನ್ನ 8 ನೇ ಸಮ್ಮೇಳನವನ್ನು ಹಮ್ಮಿಕೊಂಡಿರುವುದು ಸಂತಸದ ವಿಷಯ ಎಂದರು. ಇದೇ ಸಂದರ್ಭದಲ್ಲಿ ಡಾ: ವಿಕ್ರಂ ಸಾರಾಬಾಯಿ, ವಿಪ್ರೋ ಪ್ರೊಫೆಸರ್ ಪದ್ಮಭೂಷಣ ಡಾ: ವಿ.ಎನ್. ಸುರೇಶ್ ಅವರಿಗೆ ಬಾಹ್ಯಾಕಾಶ ಕ್ಷೇತ್ರದಲ್ಲಿನ ಸಾಧನೆಗೆ ಸಾಧನೆಗೆ ಜೀವಮಾನದ ಪ್ರಶಸ್ತಿಯನ್ನು ಅಕಾಡೆಮಿಯಿಂದ ನೀಡಿರುವುದು ಪ್ರಶಂಸನೀಯ ಎಂದರು.

ಬೆಂಗಳೂರಿಗೆ ಹೆಚ್ಚು ಜನ ಕೆಲಸ ಅರಸಿ ಬರುತ್ತಿದ್ದಾರೆ. ಬೆಂಗಳೂರನ್ನು ಸ್ಮಾರ್ಟ್ ಸಿಟಿಯಾಗಿ ಪರಿವರ್ತಿಸುವಲ್ಲಿ ಸರ್ಕಾರ ಉತ್ಸುಕವಾಗಿದೆ. 2020 ರ ವೇಳೆಗೆ ಐ.ಟಿ. ಕ್ಷೇತ್ರದಲ್ಲಿ 80 ಲಕ್ಷ ಜನರಿಗೆ ಉದ್ಯೋಗ ಸಿಗುವ ಸಾಧ್ಯತೆ ಇದೆ. ಅಂತೆಯೇ ಹಳ್ಳಿಗಳ ಬೆಳವಣಿಗೆಗೆ ಸಹ ಸರ್ಕಾರ ಒತ್ತು ಕೊಟ್ಟಿದೆ. ಹಳ್ಳಿಗಳನ್ನು ಸ್ಮಾರ್ಟ್ ವಿಲೇಜ್‍ಗಳನ್ನಾಗಿ ಮಾಡಬೇಕಿದೆ. ಮೂಲಭೂತ ಸೌಕರ್ಯ, ತಂತ್ರಜ್ಞಾನಗಳ ಅಭಿವೃದ್ಧಿ ಪಡೆದ ಹಳ್ಳಿಗೆ ಉತ್ತಮ "ಡಿಜಿಟಲ್ ವಿಲೇಜ್' ಪ್ರಶಸ್ತಿ ನೀಡಲಾಗುವುದೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ 192 ಲೇಖನಗಳನ್ನೊಳಗೊಂಡ ಸ್ಮರಣ ಸಂಚಿಕೆಯನ್ನು ಸಚಿವರು ಬಿಡುಗಡೆಗೊಳಿಸಿದರು

ಕಾರ್ಯಕ್ರಮದಲ್ಲಿ ವಿಜ್ಞಾನ ತಂತ್ರಜ್ಞಾನ ಇಲಾಖೆಯ ನಿರ್ದೇಶಕರಾದ ಡಾ: ಎಚ್. ಹೊನ್ನೇಗೌಡ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದ ಡಾ: ಅಪ್ಪಾಜಿಗೌಡ, ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ: ಎ.ಜಿ. ನಟರಾಜ್ ಉಪಸ್ಥಿತರಿದ್ದರು.

ಪಲ್ಲವಿ/ಕವನ/ಕೆಎಂ

## ನಗರ ನೀರು ಸರಬರಾಜು ಅಭಿವೃದ್ಧಿ ವತಿಯಿಂದ ಒಟ್ಟು 179 ಮಂದಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಆದೇಶ ನೀಡಲಾಗಿದೆ – ವಿನಯ್‌ಕುಮಾರ್ ಸೊರಕೆ

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಈವರೆಗೆ 153 ಮಂದಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಆದೇಶಗಳನ್ನು ನೀಡಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ವಿನಯ್‌ಕುಮಾರ್ ಸೊರಕೆ ಅವರು ತಿಳಿಸಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಕಾಸಸೌಧದಲ್ಲಿ ಇಂದು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 26 ಮಂದಿಗೆ ನೇಮಕಾತಿ ಪತ್ರವನ್ನು ವಿತರಿಸಿ ಮಾತನಾಡಿದ ಸಚಿವರು ಮಹಾನಗರಪಾಲಿಕೆಗಳಲ್ಲಿ ಖಾಲಿ ಇರುವ ಸುಮಾರು 1697 ಗ್ರೂಪ್ ಡಿ ಹುದ್ದೆಗಳನ್ನು ಭರ್ತಿಮಾಡಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದ ಸಚಿವರು, ಹಾಗೆಯೇ ಪಾಲಿಕೆಗಳಲ್ಲಿ ಖಾಲಿ ಇರುವ ಎ, ಬಿ ಮತ್ತು ಸಿ ದರ್ಜೆಯ ಸುಮಾರು 1055 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸೂಚಿಸಲಾಗಿದ್ದು, ಇನ್ನು ಕೆಲವೇ ದಿನಗಳಲ್ಲಿ ಆಯೋಗದಿಂದ ನೇಮಕಾತಿಗೆ ಸಂಬಂಧಿಸಿದ ಅಧಿಸೂಚನೆ ಹೊರಬೀಳಲಿದೆ ಎಂದರು.

ನಗರ ಯೋಜನಾ ಇಲಾಖೆಯಲ್ಲಿ ಖಾಲಿ ಇರುವ 177 ವಿವಿಧ ದರ್ಜೆಯ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದ ಸಚಿವರು ಅನುಕಂಪದ ಆಧಾರದ ನೌಕರಿ ನೀಡುವಂತೆ 90 ಮಂದಿ ಅರ್ಜಿ ಸಲ್ಲಿಸಿದ್ದು ಹಂತ ಹಂತವಾಗಿ ಅವರಿಗೂ ನೇಮಕಾತಿ ಆದೇಶ ನೀಡಲಾಗುವುದು ಎಂದು ಭರವಸೆ ನೀಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ 53 ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಒಂದು ವಾರದಲ್ಲಿ ಪ್ರಕಟಣೆ ಹೊರಡಿಸಲಾಗುವುದು ಎಂದು ಮಾತನಾಡಿದ ಸಚಿವರು ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸೇರಿದ 10 ಸಹಾಯಕ ಅಭಿಯಂತರರು ಹಾಗೂ ನಾಲ್ಕು ಪ್ರಥಮ ದರ್ಜೆ ಲೆಕ್ಕಸಹಾಯಕರು ಹುದ್ದೆಗಳ ನೇಮಕಕ್ಕೂ ಕ್ರಮ ಕೈಗೊಳ್ಳಲಾಗಿದೆ ಎಂದರು.

ನೇರ ನೇಮಕಾತಿ ಅನ್ವಯ 100ು ಸಹಾಯಕ ಅಭಿಯಂತರ ಮತ್ತು 31 ಪ್ರಥಮ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಭರ್ತಿಗೆ ಇನ್ನು ಹತ್ತು ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಮಂಡಳಿಯಲ್ಲಿ ಖಾಲಿ ಇರುವ ಮೂರು ಮುಖ್ಯ ಅಭಿಯಂತರರ ನೇಮಕಕ್ಕೂ ಚಾಲನೆ ನೀಡಲಾಗಿದೆ ಎಂದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷರಾದ ಜಿ. ಸಿ. ಚಂದ್ರಶೇಖರ್, ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಮಣಿವಣ್ಣನ್ ಹಾಗೂ ಹಿರಿಯ ಅಧಿಕಾರಿಗಳು ಸೇರಿದಂತೆ ನೇಮಕಾತಿ ಆದೇಶ ಪಡೆಯಲು ಆಗಮಿಸಿದ್ದ ಫಲಾನುಭವಿಗಳು ಸಭೆಯಲ್ಲಿ ಹಾಜರಿದ್ದರು.

ಪಲ್ಲವಿ:ಕೆಪಿಪಿ:ಜಿಪಿಆರ್.

## ಮುಖ್ಯಮಂತ್ರಿ ಸ್ವಯಂ ಉದ್ಯೋಗ ಸೃಜನ ಯೋಜನೆಯಡಿ ನಿರುದ್ಯೋಗಿ ಯುವಕ/ಯುವತಿಯರಿಂದ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

2015–16 ನೇ ಸಾಲಿನ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಂತೆ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಘಟಕಕ್ಕೆ ಗರಿಷ್ಠ ರೂ 10 ಲಕ್ಷದಂತೆ 2000 ಕಿರು ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ಪ್ರಸ್ತಾಪಸಿದ್ದು, ಅದರಂತೆ ನಿರುದ್ಯೋಗಿ ಯುವಕ/ಯುವತಿಯರಿಗೆ ವಿವಿಧ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಿದೆ.

ಪ್ರಸ್ತುತ ಸಾಲಿನಲ್ಲಿ ಮುಖ್ಯಮಂತ್ರಿಗಳ ಸ್ವಯಂ ಉದ್ಯೋಗ ಸೃಜನ ಯೋಜನೆಯಡಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ 1250 ಘಟಕಗಳು ಮತ್ತು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮೂಲಕ 750 ಘಟಕಗಳನ್ನು ಸ್ಥಾಪಿಸಲಿದೆ.

ಈ ಯೋಜನೆಯಡಿ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕವನ್ನು ನವೆಂಬರ್ 16 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲೆಗಳ ಜಂಟಿ ನಿರ್ದೇಶಕರ ಕಚೇರಿ, ಜಿಲ್ಲಾ ಕೈಗಾರಿಕಾ ಕೇಂದ್ರಗಳು ಮತ್ತು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಜಿಲ್ಲಾ ಕಚೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಪಲ್ಲವಿ:ಬಾಬು:ಜಿಪಿಆರ್.

## ದ್ವಿದಳ ಧಾನ್ಯಗಳ ಇ–ಹರಾಜು ನೋಂದಣಿಗೆ ಅವಕಾಶ

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

ಕರ್ನಾಟಕ ಅಗತ್ಯ ವಸ್ತುಗಳ ಪರವಾನಿಗೆ ಆದೇಶ 1986 ರಡಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯು ಆಜಪ್ತಿ ಮಾಡಿರುವ ದ್ವಿದಳ ಧಾನ್ಯಗಳನ್ನು ನವೆಂಬರ್ 5 ರಿಂದ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಯಾ ಜಿಲ್ಲಾಧಿಕಾರಿಗಳು ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕ್ರಮಕೈಗೊಂಡಿದ್ದಾರೆ.

ಈ ಮೊದಲು ಎಪಿಎಂಸಿ ಇ-ಹರಾಜು ಪೋರ್ಟಲ್‌ನಲ್ಲಿ ಜಿಲ್ಲೆಯ ವ್ಯಾಪಾರಸ್ಥರು ಮಾತ್ರ ಭಾಗವಹಿಸಲು ಅವಕಾಶವಿತ್ತು. ಅದನ್ನು ಮಾರ್ಪಡಿಸಿ ರಾಜ್ಯದ ಬೇರೆ ಬೇರೆ ಜಿಲ್ಲೆಯ ವ್ಯಾಪಾರಸ್ಥರು ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಹರಾಜು ಪ್ರಕ್ರಿಯೆಯಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಭಾಗವಹಿಸಲು ಇಚ್ಛಿಸುವ ನೋಂದಾಯಿತ ವ್ಯಾಪಾರಸ್ಥರು ಆಯಾ ಜಿಲ್ಲೆಯ ಎ.ಪಿ.ಎಂ.ಸಿ. ಯಲ್ಲಿ ನೋಂದಾಯಿಸಿಕೊಳ್ಳುವಂತೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಆಯುಕ್ತರು ಕೋರಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್.

## ಕೃಷಿ ಪದವೀಧರರಾಗಿ ನೋಂದಣಿ

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಪದವಿ ಪಡೆದು 5 ವರ್ಷ ಪೂರೈಸಿದ ಪದವೀಧರರಿಂದ "ನೋಂದಾಯಿತ ಪದವೀಧರರಾಗಿ" ನೋಂದಣಿ ಮಾಡಿಸಲು ಅರ್ಜಿ ಆಹ್ವಾನಿಸಿದೆ.

ಅರ್ಜಿಗಳನ್ನು ಡಿಸೆಂಬರ್ 1, 2015 ರಿಂದ ಡಿಸೆಂಬರ್ 31 ರೊಳಗೆ ಕೃಷಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪಡೆದು ಭರ್ತಿಮಾಡಿದ ಅರ್ಜಿಗಳ ಜೊತೆ (ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು (Comptroller, UAS, Bangalore) ಇವರ ಹೆಸರಿನಲ್ಲಿ ಪಡೆದ) ರೂ 500/- ಗಳ ಡಿ.ಡಿ. ಯನ್ನು ಲಗತ್ತಿಸಿ ದಿನಾಂಕ : 31-12-2015 ರೊಳಗೆ ಕುಲಸಚಿವರ ಕಚೇರಿಗೆ ತಲುಪಿಸಬೇಕು. ಡಿಸೆಂಬರ್ 1, 2015 ರಿಂದ ಡಿಸೆಂಬರ್ 31 ರೊಳಗೆ ಖರೀದಿ ಮಾಡಿದ ಡಿ.ಡಿ. ಯನ್ನು ಮಾತ್ರ ಸಲ್ಲಿಸಬೇಕು. ನಿಗದಿತ ಅವಧಿಯ ನಂತರ ಬಂದ ಅರ್ಜಿಗಳು/ಅಪೂರ್ಣ ಹಾಗೂ ನಿಗದಿತ ಶುಲ್ಕ ಭರಿಸದೆ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಕುಲಸಚಿವರ ಕಚೇರಿಯ ದೂರವಾಣಿ ಸಂಖ್ಯೆ 080-23330984/23330149 ಸಂಪರ್ಕಿಸಿ ಅಥವಾ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uasbangalore.edu.in ನಲ್ಲಿ ಪಡೆಯಬಹುದು.

ಪಲ್ಲವಿ:ಬಾಬು:ಜಿಪಿಆರ್.

## ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಖಾಲಿ ಇರುವ (ಹೈದರಾಬಾದ್-ಕರ್ನಾಟಕ ಹುದ್ದೆಗಳನ್ನು ಒಳಗೊಂಡಂತೆ) ಈ ಕೆಳಕಂಡ ಅರೆ-ವೈದ್ಯಕೀಯ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಶುಶ್ರೂಷಕರು (ಬಿಎಸ್ಸಿ ನರ್ಸಿಂಗ್)-179, ಶುಶ್ರೂಷಕರು (ಡಿಪ್ಲೊಮ ನರ್ಸಿಂಗ್)-536, ಫಾರ್ಮಾಸಿಸ್ಟ್-202, ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಂತ್ರಜ್ಞ-83, ಫಿಜಿಯೋಥೆರಪಿಸ್ಟ್-17, ನೇತ್ರ ಸಹಾಯಕರು-61, ಕಿರಿಯ ಆರೋಗ್ಯ ಸಹಾಯಕರು-525, ಕಿರಿಯ ಆರೋಗ್ಯ ಸಹಾಯಕರು (ಮಹಿಳೆ)- 501, ವೈದ್ಯಕೀಯ ದಾಖಲಾತಿ ತಂತ್ರಜ್ಞ-02, ಹಿರಿಯ ಪ್ರಯೋಗಶಾಲಾ ತಂತ್ರಜ್ಞ-26, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ-12. ಅರ್ಜಿಗಳನ್ನು ಆನ್-ಲೈನ್ ಮೂಲಕ ದಿನಾಂಕ 28.10.2015 ರಿಂದ 26.11.2015 ರವರೆಗೆ ಸಲ್ಲಿಸಬಹುದು. ಮೇಲ್ಕಂಡ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ, ವರ್ಗೀಕರಣ, ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವಿಧಾನ, ಶುಲ್ಕಪಾವತಿಸುವ ವಿಧಾನ ಇತ್ಯಾದಿ ವಿವರಗಳನ್ನು www.karhfw.gov.in/drc.aspx ನಲ್ಲಿ ಪ್ರಕಟಿಸಿರುವ ಅಧಿಸೂಚನೆಯಲ್ಲಿ ನೋಡಬಹುದಾಗಿದೆ.

ಪಲ್ಲವಿ/ಬಾಬು/ಕೆಎಂ

## ಉತ್ತಮ ಶಿಕ್ಷಣಕ್ಕಾಗಿ ಸ್ಮಾರ್ಟ್-ಕೀ ಅಡಿ 'ಜ್ಞಾನಸಂಗಮ'ಕ್ಕೆ ಚಾಲನೆ

**ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)**

**ಸ್ಮಾರ್ಟ್- ಕೀ (Smart Karnataka Education Yardstick)**ನ ಅಡಿಯಲ್ಲಿ **ಬರುವ 'ಜ್ಞಾನ ಸಂಗಮ'** ಕಾರ್ಯಕ್ರಮವನ್ನು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ. ಬಿ ಜಯಚಂದ್ರ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ, ಹಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಚಿವ ಶ್ರೀ ರೋಷನ್ ಬೇಗ್ ಅವರ ಇವರುಗಳ ಉಪಸ್ಥಿತಿಯಲ್ಲಿ ದಿನಾಂಕ: 06-11-2015 ರಂದು ಬೆಳಿಗ್ಗೆ 11.00 ಗಂಟೆಗೆ ನಗರದ ಸೆಂಟ್ರಲ್ ಕಾಲೇಜಿನ, ಜ್ಞಾನಜ್ಯೋತಿ ಸಭಾಂಗಣದಲ್ಲಿ ಉದ್ಘಾಟಿಸಲಿದ್ದಾರೆ.

ಕರ್ನಾಟಕದ ಶಿಕ್ಷಣ ವಲಯದಲ್ಲಿನ ಅತ್ಯುತ್ತಮ ಪದ್ಧತಿಗಳ ಭಾಗವಾಗಿ ಖಾಸಗಿ ವಿಶ್ವವಿದ್ಯಾಲಯಗಳು ಗ್ರಾಮಾಂತರ ಪ್ರದೇಶದ ಕಾಲೇಜುಗಳ ಉನ್ನತೀಕರಣಕ್ಕಾಗಿ ದೀರ್ಘಕಾಲದ 'ಜ್ಞಾನ ಸಮನ್ವಯ' ಎಂಬ ಅಧ್ಯಾಪಕ-ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮದ ಮೂಲಕ ಸರ್ಕಾರದೊಡನೆ ಕೈಜೋಡಿಸಿವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರ ಉಪಸ್ಥಿತಿಯಲ್ಲಿ ಒಡಂಬಡಿಕೆ ಪತ್ರಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತದೆ. ಇದು ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿ ನಡೆಯುತ್ತಿರುವ ವಿನೂತನ ಪ್ರಯೋಗವಾಗಿದೆ.

ರಾಷ್ಟ್ರದ ಐಟಿ ರಾಜಧಾನಿಯಾಗಿರುವ ಬೆಂಗಳೂರಿನಲ್ಲಿ, ಮಾಹಿತಿ ಸಂವಹನ ತಂತ್ರಜ್ಞಾನ (Information Communication Technology) (ಐಸಿಟಿ) ಕುರಿತ ಅನುಭವ ಮತ್ತು ಕೌಶಲ್ಯಗಳುಳ್ಳವರಿಗೆ ಉದ್ಯೋಗಗಳು ಲಭ್ಯತೆ ಹೇರಳ. ಇಲ್ಲಿನ ಮಾನವ ಸಂಪನ್ಮೂಲಗಳ ಉತ್ಕೃಷ್ಟತೆಯ ಪರಿಣಾಮ,

ವಿಶ್ವದ ಎಲ್ಲ ಫಾರ್ಚ್ಯೂನ್– 500 (Fortune-500) ಕಂಪೆನಿಗಳು ಇಲ್ಲಿ ತಮ್ಮ ವಹಿವಾಟನ್ನು ಆರಂಭಿಸಿವೆ.

ಈ ಪ್ರಗತಿಯನ್ನು ಅರಿತ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಆಡಳಿತವನ್ನು ಸುಗಮಗೊಳಿಸಲು, ರಾಜ್ಯದ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ, ಅತಿ ಪ್ರಸ್ತುತ ಮತ್ತು ದೂರಗಾಮಿಯಾದ ಐಸಿಟಿ ಯೋಜನೆಗಳನ್ನು ಅನಾವರಣಗೊಳಿಸಲು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿದೆ.

ಸ್ಮಾರ್ಟ್– ಕೀ ಹೃದಯ ಭಾಗದಲ್ಲಿರುವ 'ಜ್ಞಾನಸಂಗಮ' ಒಂದು ಅದ್ಭುತ ಯೋಜನೆ. ಈ ಕಾರ್ಯಕ್ರಮವು ಉನ್ನತ ಶಿಕ್ಷಣ ಕ್ಷೇತ್ರದ ಬಹುಪಾಲು ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳನ್ನು ಡಿಜಿಟೈಸ್ ಮಾಡಲು ವಿನ್ಯಾಸಗೊಂಡಿದ್ದು, ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಹಾಗೂ ಇತರ ವಲಯಗಳಲ್ಲಿ ನೂತನವೂ ಅಪೂರ್ವವೂ ಆದ ಸುಧಾರಣೆಗಳನ್ನು ತರಲಿದೆ. ಪ್ರಯತ್ನಗಳು ಮತ್ತು ಸಂಪನ್ಮೂಲಗಳ ಬಳಕೆಯಲ್ಲಿ ಗರಿಷ್ಠ ಮಟ್ಟದ ಸಾಮರಸ್ಯ ಮೂಡಿಸುವ ಧ್ಯೇಯವುಳ್ಳ ಈ ಯೋಜನೆ ಶಿಕ್ಷಣ ಕ್ಷೇತ್ರದಲ್ಲಿ ಪ್ರವೇಶಾತಿಯಿಂದ ಮೊದಲುಗೊಂಡು ವಿದ್ಯಾಭ್ಯಾಸವನ್ನು ಪೂರ್ಣಗೊಳಿಸುವವರೆಗಿನ ಪ್ರಕ್ರಿಯೆಗಳಿಗೆ ಡಿಜಿಟಲ್ ಪರಿಹಾರಗಳನ್ನು ಒದಗಿಸುತ್ತದೆ.

ಬ್ರಾಡ್ ಬ್ಯಾಂಡ್ ಮೂಲಕ ಹರಿದು ಬರುವ ಡೇಟಾ, ಮೊಬೈಲ್, ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್‌ಗಳಲ್ಲಿ ಇ–ಪಠ್ಯಾಂಶದ ಲಭ್ಯತೆಯನ್ನು ಸುಲಭಗೊಳಿಸುವುದಲ್ಲದೆ, ಡಿಜಿಟಲ್ ಜಾಲದ ಮೂಲಕ ಶೈಕ್ಷಣಿಕ ಸಂಸ್ಥೆಗಳನ್ನು ತಲುಪುತ್ತದೆ. ಎಲ್ಲ ಕ್ಯಾಂಪಸ್‌ಗಳಲ್ಲಿ ವೈ–ಫೈ (Wi-Fi) ಸೌಲಭ್ಯ ನಿರ್ಮಾಣ, ಟೆಲಿ ಶಿಕ್ಷಣಕ್ಕೆ ಪ್ರೋತ್ಸಾಹ. ಶಿಕ್ಷಣದ ಪ್ರಯೋಜನವನ್ನು ಗರಿಷ್ಠಗೊಳಿಸಲು ಸ್ಮಾರ್ಟ್ ತರಗತಿಗಳ ಸ್ಥಾಪನೆ, ಇ–ಪಠ್ಯಾಂಶದ ಲಭ್ಯತೆಗೆ ಮತ್ತು ಇ–ಗ್ರಂಥಾಲಯಗಳಿಗೆ 24/7 ಅವಕಾಶ ಕಲ್ಪಿಸುವ ಜೊತೆಗೆ ವಿದ್ಯಾರ್ಥಿಗಳಿಗೆ ಕರ್ನಾಟಕದ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಆನ್‌ಲೈನ್ ಪ್ರವೇಶಾತಿಯ ಸೌಲಭ್ಯವನ್ನೂ ಏರ್ಪಡಿಸಲಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು ಮೂಡಿಸುವ ಕ್ರಮವಾಗಿ, ವಿದ್ಯಾರ್ಥಿಗಳ ಹಾಜರಾತಿಯು ಇ–ದಾಖಲೆಯ ರೂಪದಲ್ಲಿ ನಮೂದಾಗುವುದಲ್ಲದೆ, ಅವರು ಬೋಧಕರ ಕುರಿತು ಕೂಡಲೇ ಹಿಮ್ಮಾಹಿತಿ ನೀಡಬಹುದಾಗಿದೆ. ತರಗತಿಗಳಿಗೆ ಗೈರುಹಾಜರಾಗುವ ವಿದ್ಯಾರ್ಥಿಗಳ ಕುರಿತ ಮಾಹಿತಿ ಕೂಡಲೇ ಪೋಷಕರಿಗೆ ತಲುಪಿಸುವ ವ್ಯವಸ್ಥೆ ಇಲ್ಲಿದೆ. ಜೊತೆಗೆ, ಕರ್ನಾಟಕದ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ನಡೆಯುವ ಪಾಠ ಪ್ರವಚನಗಳನ್ನು ವಿದ್ಯಾರ್ಥಿಗಳು ಕೇಳಲು ಇದರಿಂದ ಸಾಧ್ಯವಾಗುತ್ತದೆ.

ಜ್ಞಾನಕಣಜಕ್ಕೆ ವಿದ್ಯಾರ್ಥಿಗಳಿಗೆ ದೊರೆಯಲಿರುವ ಈ ಅಮಿತ ಪ್ರವೇಶದಿಂದ, ಬೋಧಕರ ಗುಣಮಟ್ಟವನ್ನು ಏಕಪ್ರಕಾರವಾಗಿ ಹೆಚ್ಚಿಸಲು ಸಾಧ್ಯವಾಗುತ್ತದೆ. ಆನ್‌ಲೈನ್‌ನಲ್ಲಿ ಡೇಟಾ ಸಂಗ್ರಹಿಸುವ ಪರೀಕ್ಷಾ ನಿರ್ವಹಣಾ ವ್ಯವಸ್ಥೆ (Examination Management System) ಅತ್ಯಂತ ಮುಂದುವರಿದ ಹಂತದಲ್ಲಿ ಕಾರ್ಯಶೀಲವಾಗಿದೆ. ಈ ಪರೀಕ್ಷಾ ನಿರ್ವಹಣಾ ವ್ಯವಸ್ಥೆ ಮತ್ತು

ಎಲೆಕ್ಟ್ರಾನಿಕ್ ಉತ್ತರ ಪತ್ರಿಕೆಗಳ ಮೌಲ್ಯಮಾಪನ (Electronic Answer Script Evaluation) ಪರೀಕ್ಷೆಗಳ ನಿರ್ವಹಣೆ ಮತ್ತು ಮೌಲ್ಯಮಾಪನದಲ್ಲಿ ಪ್ರಮುಖ ಸುಧಾರಣೆಗಳನ್ನು ತರುವುದಲ್ಲದೆ, ಮಾಹಿತಿ ಪಡೆಯುವ ಪ್ರಕ್ರಿಯೆಯ ಗೌಪ್ಯತೆ, ನಿರ್ದಿಷ್ಟತೆ, ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಲಭ್ಯತೆಯನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸುತ್ತದೆ. ಉದ್ಯೋಗದಾತರಿಗೆ ಅಭ್ಯರ್ಥಿಗಳ ಪ್ರಮಾಣ ಪತ್ರದ ಪರಿಶೀಲನೆ ಅತ್ಯಂತ ಸುಲಭವಾಗಿ ಪರಿಣಮಿಸುತ್ತದೆ.

ಉನ್ನತ ಶಿಕ್ಷಣ ಇಲಾಖೆಯು ಎಲ್ಲ ತರಗತಿಗಳಿಗೆ ಇಂಟರ್‌ನೆಟ್ ಸೌಲಭ್ಯ, ಪ್ರೊಜೆಕ್ಟರ್, ಸ್ಮಾರ್ಟ್ ಇ-ಬೋರ್ಡ್‌ಗಳು, ಮತ್ತು ಲ್ಯಾಪ್‌ಟಾಪ್‌ಗಳನ್ನು ಅಳವಡಿಸಿ, ಸ್ಮಾರ್ಟ್ ತರಗತಿಗಳನ್ನಾಗಿ ಪರಿವರ್ತಿಸಲಿದೆ. ಲಭ್ಯವಿರುವ ಅನುದಾನದ ಮಿತಿಯೊಳಗೆ ಈ ವರ್ಷ ಮತ್ತು ಮುಂದಿನ ವರ್ಷಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ.

ಈ ಎಲ್ಲ ಯೋಜನೆಗಳು ಜ್ಞಾನಸಂಗಮದ 85 ಐಸಿಟಿ ಆಧಾರಿತ ಯೋಜನೆಗಳ ಭಾಗವಾಗಿದ್ದು, ಇವು ಉನ್ನತ ಶಿಕ್ಷಣ ಇಲಾಖೆಯ ನೇತೃತ್ವ ವಹಿಸಿರುವ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಭರತ್‌ಲಾಲ್ ಮೀನಾ ಅವರ ಚಿಂತನೆಯಿಂದ ಅಸ್ತಿತ್ವ ತಳೆದಿದ್ದು, ಅವರ ಮೇಲ್ವಿಚಾರಣೆಯಲ್ಲಿ ರೂಪುಗೊಂಡಿವೆ. ಈ ಯೋಜನೆಗಳಲ್ಲಿ 15 ಆಡಳಿತಕ್ಕೆ ಸಂಬಂಧಪಟ್ಟವುಗಳಾಗಿದ್ದು, 16 ಕೇವಲ ವಿಶ್ವವಿದ್ಯಾಲಯಗಳಿಗೆ, 7 ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಿಗೆ, 47 ವಿಶ್ವವಿದ್ಯಾಲಯ, ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಿಗೆ ಸಂಬಂಧಪಟ್ಟವಾಗಿವೆ. ಈ ಎಲ್ಲ ಯೋಜನೆಗಳೂ ಪರಸ್ಪರ ಸಂಬಂಧವುಳ್ಳವಾಗಿದ್ದು, ಪರಸ್ಪರ ಸಂಪರ್ಕವನ್ನು ಹೊಂದಿ ಉತ್ತಮ ಪರಿಸರದಲ್ಲಿ ಕಾರ್ಯನಿರ್ವಹಿಸುತ್ತವೆ. ಒಮ್ಮೆ ವಿನ್ಯಾಸಗೊಂಡ ಸಾಫ್ಟ್‌ವೇರ್ ಎಲ್ಲ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಉಚಿತವಾಗಿ ಲಭ್ಯವಾಗಲಿವೆ.

ಐಸಿಟಿ ಬಳಕೆ ಎಲ್ಲ ವಿದ್ಯಾರ್ಥಿಗಳಿಗೂ ಆನ್‌ಲೈನ್‌ನಲ್ಲಿ ಪ್ರವೇಶಾತಿ, ಆನ್‌ಲೈನ್‌ನಲ್ಲಿ ಪರೀಕ್ಷಾ ಪ್ರವೇಶ ಪತ್ರ, ಆನ್‌ಲೈನ್‌ನಲ್ಲಿ ಫಲಿತಾಂಶವನ್ನು ಪಾರದರ್ಶಕವಾಗಿ ಮತ್ತು ಸೂಕ್ತವಾಗಿ ಪಡೆದುಕೊಳ್ಳುವ ಅವಕಾಶವನ್ನು ಕಲ್ಪಿಸುತ್ತದೆ. ಕಷ್ಟವಿಲ್ಲದೆ ಅವರಿಗೆ ವಿದ್ಯಾರ್ಥಿವೇತನ ನೀಡುವುದನ್ನೂ ಇದು ಸಾಧ್ಯವಾಗಿಸುತ್ತದೆ. ವಿದ್ಯಾರ್ಥಿಗಳಿಗೆ ನೌಕರಿ ನೀಡಬಯಸುವ ಉದ್ಯೋಗದಾತರಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ವೃತ್ತಿಪರ ಪ್ರಗತಿಯ ವಿವರಗಳು ಆನ್‌ಲೈನ್‌ನಲ್ಲಿ ಲಭ್ಯವಾಗುತ್ತದೆ.

ಈ ಎಲ್ಲ ಯೋಜನೆಗಳು ಪ್ರಾಯೋಗಿಕವಾಗಿ National Informatics Centre (NIC) ನಿಂದ ಪರೀಕ್ಷಿಸಲ್ಪಟ್ಟಿದ್ದು ಬಹುಪಾಲು ಯೋಜನೆಗಳನ್ನು ಈಗಾಗಲೇ ಸಮಗ್ರವಾಗಿ ಅಳವಡಿಸಿಕೊಳ್ಳಲಾಗಿದೆ. ಭಾರತದಲ್ಲೇ ಪ್ರಪ್ರಥಮ ಬಾರಿಗೆ ಇಂತಹ ವಿದ್ಯಾರ್ಥಿಸ್ನೇಹಿ ಸುಧಾರಣೆಗಳನ್ನು ಇಷ್ಟು ಬೃಹತ್ ಪ್ರಮಾಣದಲ್ಲಿ ತರಲಾಗುತ್ತಿದೆ.

ವಿದ್ಯಾರ್ಥಿಗಳ ಉದ್ಯೋಗಾರ್ಹತೆ ಮತ್ತು ಕೌಶಲ್ಯಾಭಿವೃದ್ಧಿಯೂ ಕೂಡ ಇಲಾಖೆಯ ಪ್ರಧಾನ ಆದ್ಯತೆಗಳಲ್ಲಿ ಒಂದಾಗಿದೆ. ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ

ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮ (National Skill Development Corporation) ದ ಜೊತೆಗೆ ಇಲಾಖೆ ಒಡಂಬಡಿಕೆ ಮಾಡಿಕೊಂಡಿದೆ. ಎಲ್ಲ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳೂ ಈ ಕಾರ್ಯಕ್ರಮದ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ. ಈ ತರಬೇತಿ ಕಾರ್ಯಕ್ರಮದ ಪ್ರಗತಿಯನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಲಾಗುತ್ತದೆ.

ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿನ 50 ವಿಶ್ವವಿದ್ಯಾಲಯಗಳು, 2992 ಕಾಲೇಜುಗಳು, 305 ಪಾಲಿಟೆಕ್ನಿಕ್‌ಗಳು ಮತ್ತು 207 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕಾಗಿ ಐಸಿಟಿ ಬಳಕೆಗೆ ಉತ್ತೇಜನ ದೊರೆಯಲಿದೆ. ಇಡೀ ವಿಶ್ವದಲ್ಲೇ ͵ಎಚಿಡಿಜಜ ಟಜಚಿಡಿಟುಟಿಂಗಾಗಿ ರೂಪುಗೊಳ್ಳಲಿರುವ ಜಾಲ ಇದಾಗಲಿದೆ.

ಐಸಿಟಿ ಯೋಜನೆಗಳ ತುರ್ತು ಅನುಷ್ಠಾನದಿಂದ ಜಾಲಸಂಪರ್ಕದ ಮೂಲಕ ಸಾಮರಸ್ಯ, ಕನಾಟಕದ ಎಲ್ಲ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಯಾವುದೇ ಸಂಸ್ಥೆಯ ಶೈಕ್ಷಣಿಕ ಅಂಶಗಳಿಗೆ ಯಾವುದೇ ಸ್ಥಳದಲ್ಲಿ, ಯಾವುದೇ ಸಮಯದಲ್ಲಿ ಮಿತಿಯಿಲ್ಲದ ಲಭ್ಯತೆ. ಐಸಿಟಿ ಬಳಕೆ ವಿದ್ಯಾರ್ಥಿಗಳ ಸ್ಪರ್ಧಾತ್ಮಕತೆ ಮತ್ತು ಉದ್ಯೋಗಾರ್ಹತೆಗಳನ್ನು ಬಹುಮಟ್ಟಿಗೆ ಹೆಚ್ಚಿಸುತ್ತದೆ. ಮುಂಬರುವ ದಿನಗಳಲ್ಲಿ ಶಿಕ್ಷಣ ಕ್ಷೇತ್ರದ ಎಲ್ಲ ಪಾಲುದಾರರಿಗೂ ಐಸಿಟಿ ಬಳಕೆಯ ಪ್ರಯೋಜನ ದೊರೆಯಲಿದ್ದು, ಕರ್ನಾಟಕ IT/BT ಹಾಗೂ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿ ಮುಂದುವರಿಯಲಿದೆ ಎಂಬ ಭರವಸೆಯನ್ನು ಉನ್ನತ ಶಿಕ್ಷಣ ಇಲಾಖೆ ಇರಿಸಿಕೊಂಡಿದೆ.

ಪಲ್ಲವಿ

# **<u>Smart KEY's JnanaSangama to take off tomorrow</u>**

Bangalore, November 5, (Karnataka Information)

'Jnana Sangama' Programme under SMART – KEY (KARNATAKA EDUCATION YARDSTICK) is being launched by Chief Minister Sri Siddaramaiah, at 11.00 a.m. on 06-11-2015 at Jnana Jyothi Auditorium, Central College, Bangalore, in the presence of Minister for Law, Justice and Parliamentary Affairs and Higher Education, T.B. Jayachandra and Minister for Infra-structure Development, Haj & Information R. Roshan Baig.

'Jnana Sangama' is at the core of the 'Smart Karnataka Education Yardstick' (Smart-KEY). This programme has been designed for digitizing most of the academic and administrative activities of the Higher Education sector and will bring about path-breaking changes and reforms in most academic and other activities of educational Institutions. It aims at optimum synergy in efforts and

resources, end to end smart digital solution from admission to completion of education.

Bangalore being the IT capital of India is known for being a haven to those with skills and experience in the areas of Information Communication Technology (ICT). The human resource here, is so skillful that, all Fortune 500 Companies of the World have their presence here. Having noticed this development the Department of Higher Education, Government of Karnataka has now prepared a roadmap by unleashing major and far reaching ICT initiatives in Higher Education by facilitating ease of administration, academic access for students, colleges, Polytechnics and Universities both in public and private domain throughout Karnataka.

Data flow through broadband will ease accessibility on mobiles, laptops and computers and is proposed to reach academic institutions through digital net-working, setting up of Wi-Fi on all campuses, promotion of tele-education. Education would be optimised by establishment of smart classrooms and 24/7 access to e-content and digital libraries besides giving students the facility to obtain admission on online in all Higher Educational institutions all over Karnataka.

To bring in discipline the students' attendance will be e-documented and they will be able to give instant feedback about each class conducted by Teachers. Report of absence of wards from classes will go from system to parents. Besides, they would also be able to have access to the classes conducted in any institution all over Karnataka. This would ensure equitable quality upgradation of Teachers and students through unlimited access to knowledge repository. The Education Management Information System (EMIS) for online pooling and use of data is now in advanced stage of operation. It is there for all colleges and Universities. Examination Management System (EMS) Electronic Answer Script Evaluation (EASE) are set to bring about major reforms in conduct of exams and evaluation ensuring the highest degree of secrecy, accuracy, transparency, accountability and accessibility to classified information. e- Verification of documents for employers will become very easy.HED aims to make all classrooms as Smart Classrooms with all Internet connectivity, projector, smart eBoards and a Laptop in every class. Digital literacy training will be given to staff. This all will be done this year and next year within the grants available.

The initiatives under 'Smart - Karnataka Education Yardstick' through Jnana Sangama are part of 85 ICT based initiatives conceived and initiated under guidance and close supervision of Shi Bharat Lal Meena Additional Chief

Secretary heading the Higher Education Department. 15 of these are related to Administration, 16 related exclusively to Universities, 7 to Colleges and Polytechnics and 47 to Universities, Colleges and Polytechnics. Another good feature is that all initiatives are interconnected and inter related and these work in good ecosystem. Software once developed is freely available to all institutions, private and public.

ICT usage will enable students to get their admission online, hall tickets can be given online and their results would be reached to them online in a transparent and appropriate manner. It will also ensure that their scholarships are given to them effortlessly. Students' academic and vocational colleges profile is accessible to those employers who wish to employthem.

The ICT initiatives have been tested on a pilot basis developed by National Informatics Centre (NIC) and most of initiatives have already been adopted in holistic manner. HED takes pride that such a large scale reforms and changes have been brought about for the first time in India in such all-encompassing and student friendly manner. The ICT initiatives being launched on 06-11-2015 will strengthen quality learning eco-system among students in Karnataka.

Employability and Skill up gradation is also a very high priority of department. For this to happen NSDC (National Skill Development Corporation) has been involved. MOU will be signed for making this happen. Students willing to enroll in all Institutions will benefit. Progress of activities will be monitored online.As a part of Best practice in Karnataka all Private – Public Universities have joined hands for helping colleges in rural areas of State through long term Teachers – Students exchange programme known as Jnana Samanvaya. MOUs will be signed in the presence of Honourable CM and Higher Education Minister. This is a unique experiment in Country happening for the first time.

ICT use for quality learning will get major boost in 50 Universities, 2992 Colleges, 305 Polytechnics, 207 Engineering Colleges in both Public and Private domain. This is going to be the largest networking for shared learning in the World.

With fast track implementation of ICT initiatives, the Department hopes that the following objectives of scheme would be realized: synergy through Networking, unlimited access to all students and teachers of Karnataka anywhere, anytime about any academic content of any Institution of State. Use of ICT will greatly enhance their competitiveness and employability. All these will immensely benefit all stakeholders in coming days and once again Karnataka will remain a leader in the field of IT /BT, Higher Education.

Pallavi

## ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

**ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)**

**ಪೊಲೀಸ್ ಸಬ್–ಇನ್ಸ್‌ಪೆಕ್ಟರ್‌ಗಳ ಒಟ್ಟು 233 ಖಾಲಿ ಹುದ್ದೆಗಳ ನೇರ ನೇಮಕಾತಿಗಾಗಿ ಪ್ರಕಟಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ದಿನಾಂಕ: 8.10.2015 ರಿಂದ 6.11.2015 ರವರೆಗೆ ಆಹ್ವಾನಿಸಲಾಗಿತ್ತು. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 6.11.2015ನ್ನು ವಿಸ್ತರಿಸಿ ದಿನಾಂಕ: 21.12.2015 ರ ಸಂಜೆ 06.00 ಗಂಟೆ ಒಳಗಾಗಿ ಸಲ್ಲಿಸಬಹುದಾಗಿದೆ ಮತ್ತು ಶುಲ್ಕವನ್ನು ಅಧಿಕೃತ ಬ್ಯಾಂಕ್ ಕಛೇರಿ ವೇಳೆಯಲ್ಲಿ ಪಾವತಿಸಲು ಕೊನೆಯ ದಿನಾಂಕ: 22.12.2015 ಆಗಿದೆ ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.**

**ಪಲ್ಲವಿ/ಬಾಬು/ಕೆಎಂ**

## ರಾಜಗೋಪಾಲ್‌ಗೆ ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿ

**ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2015 ನೇ ಸಾಲಿನ ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿಯನ್ನು ಖ್ಯಾತ ಮೃದಂಗ ಕಲಾವಿದರಾದ ವಿ.ಎಸ್. ರಾಜಗೋಪಾಲ್ ಅವರಿಗೆ ನೀಡಲು ನಿರ್ಧರಿಸಿ ಆದೇಶ ಹೊರಡಿಸಿದೆ.**

**ಪಂಡಿತ್ ಇಂಧೂಧರ ನಿರೋಡಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಆಯ್ಕೆ ಸಮಿತಿಯು ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಮಾಡಿರುವ ಸಾಧನೆ, ವಿದ್ವತ್ತು, ಹಿರಿತನ ಮತ್ತು ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಗಮನಿಸಿ ವಿ.ಎಸ್. ಬೆಂಗಳೂರಿನ ರಾಜಗೋಪಾಲ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು ಎಂದು ಇಲಾಖೆಯ ಆದೇಶ ತಿಳಿಸಿದೆ.**

**ಪಲ್ಲವಿ/**

## <u>ನನ್ನ ವಿರುದ್ಧ ಪಿತೂರಿ ಸತ್ಯಕ್ಕೆ ದೂರವಾದುದು– ಹೆಚ್. ಆಂಜನೇಯ</u>

**ಬೆಂಗಳೂರು, ನವೆಂಬರ್ 5 (ಕರ್ನಾಟಕ ವಾರ್ತೆ)**

ಒಂದು ಖಾಸಗಿ ವಾಹಿನಿಯಲ್ಲಿ ನನ್ನ ಹಾಗೂ ನನ್ನ ಪತ್ನಿ ವಿರುದ್ಧ ಪಿತೂರಿ ನಡೆದಿರುವ ಸುದ್ದಿ ವರದಿಯಾಗಿದೆ. ಇದು ಸತ್ಯಕ್ಕೆ ದೂರವಾದುದು ಎಂದು ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ಸ್ಪಷ್ಟಪಡಿಸಿದರು.

ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ಘಟನೆ ಹಿಂದೆ ನನ್ನನ್ನು ರಾಜಕೀಯವಾಗಿ ಮುಗಿಸಲು ಪಿತೂರಿ ನಡೆದಿದ್ದು ನನ್ನ ತೇಜೋವದೆ

ಮಾಡುವ ಸಂಚು ಮತ್ತು ಷಡ್ಯಂತ್ರ ಅಡಗಿದೆ. ಆದರೆ ಅದರ ಉದ್ದೇಶ ಯಶಸ್ವಿಯಾಗಿಲ್ಲ ಎಂದು ಸಚಿವರು ತಿಳಿಸಿದರು. ನಾನು ಭ್ರಷ್ಟಾಚಾರದಿಂದ ಫಲಾನಯಯನವಾಗುವಂತ ಪ್ರವೃತ್ತಿಯವನಲ್ಲ. ಆಗಾಗಿ ನಾನು ನಿಮ್ಮ ಮುಂದೆ ಸ್ಪಷ್ಟನೆ ನೀಡುತ್ತಿದ್ದೇನೆ. ನಿನ್ನೆ ನಮ್ಮ ಮನೆಗೆ ಯಾರೋ ಬಂದು ನನ್ನ ಪತ್ನಿ ಭೇಟಿ ಮಾಡಲಿಚ್ಛಿಸಿದ್ದಾರೆ. ಆಗ ಯಾವುದೇ ದುಡ್ಡಿನ ವಿಚಾರ ಹಾಗೂ ಹಣಕಾಸಿನ ವಿಚಾರ ಮಾತನಾಡಿಲ್ಲ. ಅವರು ಮನೆಯಿಂದ ಹೊರ ಹೋದಮೇಲೆ ಟೇಬಲ್ ಮೇಲೆ ಒಂದು ಕವರ್ ಇತ್ತು. ಆ ಕವರ್‌ನಲ್ಲಿ ಯಾವುದೇ ಹಣ ಇರಲಿಲ್ಲ ಎಂಬ ಮಾಹಿತಿ ಗೊತ್ತಾಯಿತು. ಜಿಲ್ಲಾ ಮಟ್ಟದಲ್ಲಿ ಆಹಾರ ಪೂರೈಕೆಗೆ ಗುತ್ತಿಗೆ ನೀಡಲಾಗಿತ್ತು. 17 ಜನರು ಭಾಗವಹಿಸಿದ್ದರು. ಅರ್ಹ ಎಲ್1 ಗುತ್ತಿಗೆದಾರರಿಗೆ ಆಹಾರ ಪೂರೈಕೆಗೆ ಅನುಮತಿ ನೀಡಲಾಗಿತ್ತು ಎಂದ ಸಚಿವರು ಇಲಾಖಾಧಿಕಾರಿಯೊಬ್ಬರು ಯಾರನ್ನ ಯಾಕೆ ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು ಎಂದು ಗೊತ್ತಿಲ್ಲ ಎಂದು ಸಚಿವರು ತಿಳಿಸಿದರು. ನನ್ನ ಮನೆ ಬಾಗಿಲು ಸದಾ ತೆರೆದಿರುತ್ತದೆ. ಮನೆಗೆ ಬಂದವರನ್ನು ಸ್ವಾಗತಿಸುವುದು ಸಂಪ್ರದಾಯ ಎಂದ ಸಚಿವರು ಈಗಾಗಲೇ ಈ ಘಟನೆ ಕುರಿತಂತೆ ಹಿಂದುಳಿದ ವರ್ಗಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ತನಿಖೆ ನಡೆಸುವಂತೆ ಆದೇಶಿಸಲಾಗಿದೆ ಎಂದರು. ಈ ತನಿಖೆಯಿಂದ ಸತ್ಯ ಏನೆಂಬುದು ಹೊರಬರುತ್ತದೆ ಎಂದ ಸಚಿವರು ಈ ಘಟನೆ ಕುರಿತಂತೆ ನಾನು ಮುಖ್ಯಮಂತ್ರಿಯವರೊಂದಿಗೆ ಚರ್ಚೆ ನಡೆಸಿಲ್ಲ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಪಲ್ಲವಿ/ಕೆಪಿಪಿ/